# FAIRS AND FESTIVALS OF HALMATHA CULTURE

**Dr. ChikkannaYennekatte**
Dept. of kannada, GFGC, Sira

## ಜಾತ್ರೆ-ಉತ್ಸವಗಳು

**ಡಾ.ಚಿಕ್ಕಣ್ಣಯಣ್ಣೆಕಟ್ಟೆ**

ಜಾತ್ರೆಗಳು ಜನಪದ ಸಂಸ್ಕೃತಿಯ ಒಂದು ವಿಶಿಷ್ಟ ಪ್ರಕಾರ, ಜಾತ್ರೆ ಪರಿಸೆ, ತೇರು ಬುರ್ಜು ರಥೋತ್ಸವ, ಉತ್ಸವ, ಪಲ್ಲಕ್ಕಿ, ಬಂಡಿ ಉತ್ಸವ, ದೇವರ ಅಡ್ಡೆ ಉತ್ಸವ, ಈ ಮೊದಲಾದ ಹೆಸರುಗಳಿಂದ ಕರೆದು ಸಂಭ್ರಮಿಸುವುದು ಜನಪದರ ಇದೊಂದು ಜಾತಿ ಮೀರಿದ ಒಕ್ಕೂಟ. ಮರದಕಲ್ಲಿನ ಪುಟ್ಟಕಲ್ಲುಗಾಲಿ ಹಾಕಿ, ತೇರು ತಯಾರಿಸುವ ಸಂಪ್ರದಾಯ ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ. ಜಾತ್ರೆಯ ಕಾಲದಲ್ಲಿ ವಿವಿಧ ಬಗೆಯ ವಾನಗಳೂ ನಡೆಯುತ್ತವೆ. ಈ ಎಲ್ಲವೂ ದೇವರ ಉತ್ಸವದ ವೈವಿಧ್ಯ ರೂಪಗಳಾಗಿವೆ. ಇವುಗಳಲ್ಲಿ ಪಲ್ಲಕ್ಕಿ ಉತ್ಸವ, ದೋಣಿ ಸೇವೆ ಉತ್ಸವ, ಆರತಿ ಸೇವೆ ಉತ್ಸವ, ನಂದಿ ಉತ್ಸವ, ವಾನಗಳಲ್ಲಿ ಬಿಲ್ವ ವೃಕ್ಷಉತ್ಸವ, ಗಂಗಾಪೂಜೆ ಉತ್ಸವ, ಸರ್ಪ ವಾಹನೋತ್ಸವ, ಮಡಿಲಕ್ಕಿ ಪಯಣ, ಶಯನೋತ್ಸವ ಉಯ್ಯಾಲೋತ್ಸವ, ಚಂದ್ರಮಂಡಲೋತ್ಸವ, ಜಾಡಿಸೇವೆ, ಮಂಡಸೇವೆ, ಬಾಯಿ ಬೀಗ, ಸರ್ಪಣಿಸೇವೆ, ಬಂಡಾರೋತ್ಸವ ಮುಂತಾದವುಗಳೆಲ್ಲವೂ ಜಾತ್ರೆ ಉತ್ಸವ ತೇರುಗಳ ಹಿನ್ನೆಲೆಯಲ್ಲಿ ಬೆಳೆದು ಬಂದ ಜನಪದ ಆಚರಣೆಗಳಾಗಿವೆ.

ಗುರುರೇವಣ, ರೇವಣಸಿದ್ದೇಶ್ವರ, ಸಿದ್ದೇಶ್ವರ ಕರಿಸಿದ್ದೇಶ್ವರ, ಕಾಡುಸಿದ್ದೇಶ್ವರ, ದೊಡ್ಡಯ್ಯ ಈ ಮೊದಲಾದ ಹೆಸರುಗಳಿಂದ ಕರೆದು, ಭಕ್ತಿ ಭಾವದಿಂದ ನಡೆದುಕೊಳ್ಳುವ ರೇವಣಸಿದ್ದೇಶ್ವರ, ಕುರುಬರ ಆರಾಧ್ಯದೈವ, ಭಕ್ತಿಭಾವ ಶೀಲ ಸಂಸ್ಕಾರಗಳ ಪುಣ್ಯನೆಲೆ. ಕುರುಬರಕಟ್ಟು ಕುಲಸಂಬಂಧಿ ವ್ಯವಹಾರ, ಇತ್ಯರ್ಥದ ಪವಿತ್ರ ತಾಣ. ಕುರುಬರ ಕುಲ ದೈವ ಬೀರಲಿಂಗ, ಕುಲಗುರು ರೇವಣಸಿದ್ಧ, ಹಾಗಾಗಿ ಕುರುಬರು ಆಚರಿಸುವ ಒಂದೊಂದು ಧಾರ್ಮಿಕ ಆಚರಣೆ ಉತ್ಸವಗಳಲೆಲ್ಲಾ ಬೀರದೇವರ ಉತ್ಸವ ಹೊರಟರೆ, ಅಲ್ಲೆಲ್ಲಾ ಗುರುರೇವಣರ ಒಂದು ಕಳಸ ಇದ್ದೇ ಇರುತ್ತದೆ. ಇದು ಕುರುಬರ ಪ್ರಬಲವಾದ ಧಾರ್ಮಿಕ ನಂಬಿಕೆ. ತರೀಕರೆ ಶಿವನಿ, ಕಡೂರು, ಅಜ್ಜಂಪುರ, ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ತಾಲೂಕಿನ ತಾಳೀಕಟ್ಟೆ ಮೊದಲಾದಕಡೆ ನಡೆಯುವ, ಬೀರದೇವರ ತೋಪಿನ ಜಾತ್ರೆಯ ಸಂದರ್ಭದಲ್ಲೂ ಬೀರದೇವರನ್ನು ಊರಿನಿಂದ ಹೊರಗೆ ಮರಗಳ ತೋಪುಕೆರೆ ಬಯಲು ತೋಟದ ಸಾಲುಗಳಲ್ಲಿ, ಇಡೀ ಊರಿನ ಜನ ಒಂದು ವಾರಗಳ ಕಾಲ, ತಮ್ಮತಮ್ಮ ಮನೆಗೆ ಮುಚ್ಚುಬಾಗಿರಲು ಹಾಕಿಕೊಂಡು, ಜಾನುವಾರುಗಳ ಸಹಿತ ಊರಿಂದ ಹೊರಗೆ ವಾಸ ಮಾಡುವಾಗ ತಮ್ಮತಮ್ಮ ಬೀಡಿನ ನಡುವೆ ಪ್ರತಿಸ್ಥಾಪಿಸುವ, ಕುಲದೈವ ಬೀರಲಿಂಗನ ಗದ್ದಿಗೆಯ ಪಕ್ಕದಲ್ಲೇ ಪುಟ್ಟದಾಗಿ ಗುರುರೇವಣರ ಗದ್ದಿಗೆ ಇರುತ್ತದೆ. ಹೀಗೆ ಒಂದು

ವಾರದವರೆಗೆ ನಡೆಯುವ ವಿವಿಧ ಉತ್ಸವ ಗದ್ದಿಗೆ ಸೇವಗಳಲ್ಲಿ ಆಯಾಯ ವಕ್ಕಲುಗಳು ಗುರುರೇವಣರ ಗದ್ದಿಗೆಗೂ ಪ್ರತ್ಯೇಕವಾಗಿಯೇ ಮಂಗಳಾರತಿ ಮಾಡಿಸುವ ಸಂಪ್ರದಾಯ ಉಳದು ಬೆಳೆದು ಬಂದಿದೆ.

## ರೇವಣಸಿದ್ದೇಶ್ವರ ಜಾತ್ರೆ ಸ್ವರೂಪ

ಗುರು ರೇವಣ್ಣಸಿದ್ಧೇಶ್ವರ ಎಂದೇ ಕರೆಯಲ್ಪಡುವ ರೇವಣರಜಾತ್ರೆ ಮಠ ಪರಂಪರೆಯ ಮುಂದುವರಿಸುತ್ತಿರುವ ಒಡೆಯರುಗಳ ನೇತೃತ್ವದಲ್ಲಿ ಜರುಗುತ್ತದೆ ಕಂತೆಸೇವೆ, ಗದ್ದಿಗೆಧಾವಳ, ಪಲ್ಲಕ್ಕಿ ಉತ್ಸವ ಚಂದ್ರಮಂಡಲೋತ್ಸವ, ಜಾಡಿಸೇವೆ, ಮಂಡೆಸೇವೆ, ಬಿಲ್ವ ವೃಕ್ಷಉತ್ಸವ, ಗಂಗೆಪೂಜೆ, ಮಡಿಲಕ್ಕಿ ಪಯಣ, ಗದ್ದಿಗೆ ಸೇವೆ, ಸರ್ಪವಾಹನೋತ್ಸವ, ಉಯ್ಯಾಲೋತ್ಸವ ಈ ಬಗೆಯ ಆಚರಣೆಗಳನ್ನು ರೇವಣಸಿದ್ದೇಶ್ವರನ ಜಾತ್ರೆಯ ಸಂದರ್ಭದಲ್ಲಿ ಕಾಣಬಹುದು.

ರೇವಣಸಿದ್ದೇಶ್ವರ ಸೇವಾಕರ್ತರಾಗಿ ಪರಂಪರಾಗತವಾಗಿ ಸಾಗಿಬಂದ ಒಂದೊಂದು ಬುಡಕಟ್ಟುಗಳಿಗೂ ಒಂದು ನಿರ್ದಿಷ್ಟಕಾಯಕ ನಿರ್ಧಾರವಾಗಿರುತ್ತದೆ. ಚಾಮರದವರು, ಗಂದಬಟ್ಟಲನವರು, ಪಟಾಗಾರರು, ನಂದಿಧ್ವಜದವರು, ಉಗ್ರಾಣಿಗಳು ಹೀಗೆ ದೇವರ ಉತ್ಸವ ಕಾಲದ ಸೇವೆಯ ಕೆಲಸಗಳು ಹಂಚಿಕೆಯಾಗಿರುತ್ತವೆ. ರೇವಣ್ಣಸಿದೇಶ್ವರನ ಆರಾಧನೆಯಲ್ಲಿ ಕಂತೆ ಸೇವೆ ಒಂದು ಜಾತ್ರೆಯ ಸ್ವರೂಪದಲ್ಲಿ ನಡೆಯುತ್ತದೆ. ಕಂತೆ ಸೇವೆಗಳಲ್ಲಿ ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯ ರೇವಣಸಿದ್ದೇಶ್ವರನ ಕಂತೆ ಸೇವೆ ತುಂಬಾ ಪ್ರಸಿದ್ಧವಾಗಿದೆ. ಕಂತೆ ಧಾರಣೆಕಂತೆ ಸೇವೆ ಮೊದಲಾದ ಹೆಸರುಗಳಲ್ಲಿ ಕರೆಯಲಾಗುತ್ತದೆ. ಕಂತೆ ಸೇವೆ ಹಟತ್ತಾಗಿ ಜರುಗುವ ಸೇವೆಯಲ್ಲ, ಒಂದು ವರ್ಷಕಾಲದ ವಿವಿಧ ಹಂತದ ಸೇವೆ ಈ ಸಂದರ್ಭದಲ್ಲಿ ನಡೆಯುತ್ತದೆ,

**ಬಂಢದ ಹರಕೆ–** ಇದು ಕುರಿಯ ಮಾಲೀಕ ಹಾಗೂ ದೇವಸ್ಥಾನ ಸಮಿತಿಯವರು ಒಪ್ಪಂದ ಮಾಡಿಕೊಳ್ಳುವ ಒಂದು ಆಚರಣೆ, ಆಗತಾನೆ ಹುಟ್ಟಿದ ನಾಲ್ಕು ಕಾಲುಗಳೂ ಶುದ್ಧವಿರುವ ಮಚ್ಚೆಗಳಿಲ್ಲದ ನೀಳು ಕಿವಿಯ ಟಗರು ಮರಿಯನ್ನು ಗುರುತಿಸಿ ದೇವಸ್ಥಾನದಿಂದ ತೀರ್ಥ, ಪತ್ರೆ ತಂದು ಅದರ ಮುಖ ಕಾಲುಗಳನ್ನು ತೊಳೆದು ಗಂಧ ಅಕ್ಷತೆ ಇಟ್ಟು ಪತ್ರೆ ಇಟ್ಟು ಪೂಜೆ ಮಾಡಿ ತೀರ್ಥ ಹಾಕಿ "ರೇವಣ್ಣ ಸಿದ್ದೇಶ್ವರ ಬಂಢದ ಹರಕೆ ಮರಿ" ಎಂದು ಮೀಸಲು ಬಿಡಲಾಗುವುದು. ಅಂದಿನಿಂದ ಆ ಮರಿಯು ಚೆನ್ನಾಗಿ ಮೈತುಂಬಿಕೊಂಡು ಆರು ತಿಂಗಳು ಅಥವಾ ಒಂದು ವರ್ಷದವರೆಗೆ ಸಹಜವಾಗಿಯೇ ಎಲ್ಲಾ ಕುರಿಗಳಂತೆಯೇ ಕುರಿಮಂದೆಯೊಳಗೆ ಅದು ಒಂದಾಗಿರುತ್ತದೆ. ರೇವಣ್ಣರ ಜಾತ್ರೆ ನಿಗಧಿಯಾದ ನಂತರ ಆ ಮರಿಯನ್ನು ಇತರೆ ಕುರಿಗಳೊಂದಿಗೆ ತೊಳೆದು ಬಯಲಿನಲ್ಲಿ ರೇವಣ್ಣರ ಕಳಸ ಹೂಡಿ, ಪೂಜೆ, ಪ್ರಸಾದ ಹಂಚಿ, ಮೀಸಲು ಬಂಢದ ಟಗರಿನಿಂದ ಕುರಿತುಪ್ಪಟವನ್ನು (ಬಂಢ) ಕತ್ತರಿಸಿ ಶೇಖರಿಸಲಾಗುವುದು, ಇದೊಂದು ಜಾತ್ರೆಯ ಸ್ವರೂಪ ಪಡೆದು, ವಾಲಗ, ಮೇಳ, ಕುರಿಕರೆಯುವುದು ಮೊದಲಾದ ಸಾಂಸ್ಕೃತಿ ಕಾರ್ಯಕ್ರಮಗಳಿರುತ್ತದೆ. ಬಂಢ ಕತ್ತರಿಸುವ ವ್ಯಕ್ತಿ ಉಪವಾಸವಿದ್ದು ಬಾಯಿಗೆ ಬಟ್ಟೆ ಕಟ್ಟಿಕೊಂಡು ತುಪ್ಪಟವನ್ನು ಶೇಖರಿಸಲಾಗುವುದು. ಇದೊಂದು ಜಾತ್ರೆಯ ಸ್ವರೂಪ ಪಡೆದು, ವಾಲಗ, ಮೇಳ, ಕುರಿ ಕರೆಯುವುದು ಮೊದಲಾದ

ಸಾಂಸ್ಕೃತಿಕ ಕಾರ್ಯಕ್ರಮಗಳರುತ್ತದೆ. ಅಪ್ಪಟ ಬಿಳಬಣ್ಣದ ಒಂದೂವರೆ ಗೇಣು ಉದ್ದದ ಒಂದು ಗೇಣು ಅಗಲದ ಜಾಡಿಯನ್ನು ಶುದ್ದವಾದ ಮಡಿಯುಟ್ಟು ಉಪವಾಸದಿಂದ ಕಂತೆಯನ್ನು ನೇಯಲಾಗುವುದು. ಹೀಗೆ ಸಿದ್ದವಾದ ಕಂಬಳಯನ್ನು ರೇವಣ ಸಿದ್ದೇಶ್ವರನ ಗದ್ದಿಗೆಯ ತಳಕ್ಕೆ ಹಾಸಲಾಗವುದು. ಇದಕ್ಕೆ ಗದ್ದಿಗೆ ಧಾವಳ ಎಂದು ಕರೆಯಲಾಗುವುದು. ಇದೊಂದು ವಿಶೇಷ ಹಬ್ಬವಾಗಿ ಆರತಿ, ಬಾನ, ಮಡೆ ನಡೆಯುತ್ತದೆ. ನಂದಿ ಧ್ವಜ, ಡಮರುಗ ಸೇವೆ, ಭಂಡಾರ ಸೇವೆ ನಡೆಯುತ್ತವೆ. ಕೆಲಮೊಮ್ಮೆ ತಗರ ಪವಾಡ ಎಂಬ ರೇವಣ ಸಿದ್ದೇಶ್ವರನ ಚರಿತ್ರೆಯನ್ನು ಓದಿಸುವ ಕಾರ್ಯವೂ ನಡೆಯುತ್ತದೆ. ನಂತರ ಈ ರೀತಿ ಸೇವೆಗೊಂಡ ರೇವಣ್ಣರ ಮೂರ್ತಿಯನ್ನು ಪಲ್ಲಕ್ಕಿಯ ಮೇಲೆ ಕೂರಿಸಿ ಊರತುಂಬಾ ಮರವಣಿಗೆ ನಡೆಸಲಾಗುತ್ತದೆ. ಊರಿನ ರಾಜ ಬೀದಿ, ಗೌಡರ ಮನೆ, ಕೈವಾಡದವರ ಮನೆಗಳಲ್ಲಿ ಸ್ವಾಮಿ ಗದ್ದಿಗೆ ಮಾಡಿ ವಿಶೇಷ ಪೂಜೆ ನಡಸಲಾಗುತ್ತದೆ. ಈ ಸಂದರ್ಭದಲ್ಲಿ ಅನ್ನ ಸಂತರ್ಪಣೆ, ಎಲೆ ಸೇವೆ, ದೂಪಾರತಿ, ಮಂಡೆ, ಕೆಲವೊಮ್ಮೆ ಒಡೆಯರ ವಂಶದವರಿಗೆ ಲಂಗಧಾರಣೆ ಕಾರ್ಯವೂ ನಡೆಯುತ್ತದೆ.

ಬಯಲು ಸೀಮೆಜಿಲ್ಲೆಯಾದ ತುಮಕೂರು, ಚಿತ್ರದುರ್ಗ, ಕೋಲಾರ, ಮಂಡ್ಯ, ಶಿವಮೊಗ್ಗ, ದಾವಣಗೆರೆ ಮತ್ತು ಸಿರಾ, ಅಜ್ಜಂಪುರ, ತರೀಕೆರೆ, ಕಡೂರು, ಬೀರೂರು, ತಾಳಕಟ್ಟೆ, ಚನ್ನಗಿರಿ, ಹರಿಹರ ಬೆಲಗೂರು, ಶ್ರೀರಾಮಪುರ, ಹಂದನಕೆರೆ, ಮೈಸೂರು ಜಿಲ್ಲೆಯ ಸುತ್ತೂರು, ಕೆ.ಆರ್. ನಗರ, ಚಳ್ಳಕೆರೆ ತಾಲ್ಲೂಕಿನ ದೊಡ್ಡೇರಿ, ಹಿರಿಯೂರಿನ–ಹರ್ತಿಕೋಟೆ, ಹಾಸನ ಜಿಲ್ಲೆಯ ಅಣತಿ, ಗಂಡಸಿ, ಅರಸೀಕೆರೆ, ಜಾವಗಲ್, ಕುಣಿಗಲ್ ತಾಲ್ಲೂಕಿನ ಶೆಟ್ಟಹಳ್ಳಿ, ಗುಬ್ಬಿತಾಲ್ಲೂಕಿನ ಹಾಗಲವಾಡಿ, ಮೂಗನಾಯ್ಕನ ಕೋಟೆ, ಕೊರಟಗೆರೆ ಅಕ್ಕಿರಾಂಪುರ, ಚಿತ್ರದುರ್ಗ ಜಿಲ್ಲೆಯ ಹುಲ್ಲೂರು, ದೊಡ್ಡೇರಿ ಇಲ್ಲಿನ ಗುರುರೇವಣ್ಣರ ಮಠಗಳು ಶಿವರಾತ್ರಿಯ ಸಂದರ್ಭದಲ್ಲಿ ದೇವರ ಉತ್ಸವ ಪಲ್ಲಕ್ಕಿ ಅಡ್ಡಸೇವೆ, ವಾನದರೂಪದಲ್ಲಿ ಮೆರವಣಿಗೆ ಜಾತ್ರೆಯಾಗಿ ಆಚರಣಯಾಗುತ್ತಿದೆ. ಈ ಸಂದರ್ಭದಲ್ಲಿ ಗುರುವಿನಯ್ಯನವರು ಅಥವಾ ಒಡೆಯರು ಈ ಉತ್ಸವದ ನೇತೃತ್ವ ವಹಿಸುವುದು ರೂಢಿಯಲ್ಲಿದೆ. ಕುರುಬರು ಕಡಿಮೆ ಜನಸಂಖ್ಯೆ ಇರುವ ಕಡೆಯಲ್ಲಿ ಜಾತ್ರೆ ಪರಿಸೆ ಒಂದು ಬಗೆಯಾದರೆ ಹೆಚ್ಚು ಜನಸಂಖ್ಯೆ ಇರುವ ಚಿಕ್ಕನಾಯಕನಹಳ್ಳಿ ಹಂದನಕೆರೆ, ಹಿರಿಯೂರು ಹರ್ತಿಕೋಟೆ ಇಲ್ಲೆಲ್ಲಾ ದಸರಾ ವಿಜಯದಶಮಿಯಂದು ರೇವಣಸಿದ್ದೇಶ್ವರನ ಉತ್ಸವ ವಾನಗಳಲ್ಲಿ ಮೆರವಣಿಗೆ ಹೋಗಿ ಬನ್ನಿ ಮಂಟಪದಲ್ಲಿ ಬನ್ನಿ ಮುಡಿದು ಜನಪದ ವಾದ್ಯ ವಿಶೇಷಗಳೊಂದಿಗೆ ದೇವರುಗುಡಿ ತುಂಬುವ ರೀತಿ ವಿಶಿಷ್ಟವಾಗಿದೆ. ಸಿರಾದ ರೇವಣಸಿದ್ದೇಶ್ವರನ ವಾಹನ ರಾವಣನ ವಾನವಾಗಿದ್ದು ಹತ್ತುತಲೆಯ ದೈತ್ಯಾಕೃತಿಯ ವಾನ ನೋಡುಗರಿಗೆ ಬೆರಗುಂಟು ಮಾಡುವಂತೆ ಆಕರ್ಷಕವಾಗಿರುತ್ತದೆ. ಈ ಸಂರ್ಭದಲ್ಲಿ ಕೆಂಚಣ್ಣ ತಂಡದವರು ಚಮ್ಮೇಳ ಮಾದರಿಯ ಚರ್ಮವಾದ್ಯವನ್ನು ವಿಶೇಷವಾಗಿ ನುಡಿಸುವುದನ್ನು ಗಮನಿಸಬಹುದು ಹಂದನಕೆರೆ ಚಿ.ನಾ.ಹಳ್ಳಿ ಹರ್ತಿಕೋಟೆ ಕಡೂರು ತಾಲ್ಲೂಕಿನ ಚೌಳಹಿರಿಯೂರು ರೇವಣಸಿದ್ದೇಶ್ವರನ ವಾನ ವಿಶೇಷವಾಗಿ ಜಾತ್ರೆಯ ಸ್ವರೂಪವನ್ನು ಪಡೆಯುತ್ತದೆ. ಸಾಮಾನ್ಯವಾಗಿ ಪಲ್ಲಕ್ಕಿಯ ಮೇಲೆ ರೇವಣರಉತ್ಸವ ಮೂರ್ತಿಯನ್ನು ಇಟ್ಟು ಅಲಂಕರಿಸಿ ಇಬ್ಬರು ಅದನ್ನು ಅಡ್ಡೆಯ ಮಾದರಿಯಲ್ಲಿ ಹೊತ್ತು

ಮರೆವಣಿಗೆಯಲ್ಲಿ ಸಾಗುತ್ತಾರೆ. ಈ ಪಲ್ಲಕ್ಕಿಯನ್ನು ಆರಂಭದಲ್ಲಿ ಗುರುಪರಂಪರೆಯ ಒಡೆಯರು ಸ್ವಲ್ಪದೂರ ಹೊತ್ತು ನಂತರ ಶಿಷ್ಯರಿಗೆ ಅಂದರೆ ಕುರುಬರ ಇತರೆಯವರ ಹೆಗಲಗೆ ಕೊಡುವುದು ಸಂಪ್ರದಾಯವಾಗಿದೆ.

ರಾಮನಗರ ಜಿಲ್ಲಾ ಕೇಂದ್ರದಿಂದ 22 ಕಿ.ಮೀ ದೂರದ ಪಶ್ಚಿಮಕ್ಕೆ ರೇವಣ ಸಿದ್ದೇಶ್ವರ ಬೆಟ್ಟವಿದೆ. ಇದು ರೇವಣರ ತಪೋಭೂಮಿ ಎಂದು ರೇವಣರು ಲೋಕ ಕಲ್ಯಾಣದ ಸಲುವಾಗಿ ಕೈಗೊಂಡ ಸಂಚಾರದ ಸಮಯದಲ್ಲಿ ಈ ಬೆಟ್ಟದಲ್ಲಿ ತಂಗಿದ್ದರೆಂಬ ಐತಿಹ್ಯವಿದೆ. ಈ ಬೆಟ್ಟದಲ್ಲಿನ ಗವಿ ರೇವಣರ ವಾಸ ಸ್ಥಳವಾಗಿದ್ದು, ಈಗ ಇದನ್ನು ಮೇಗಳ ಗವಿ ಮಠ ಎಂದು ಕರೆಯಲಾಗುತ್ತದೆ. ಶಿವರಾತ್ರಿಯ ಸಂದರ್ಭದಲ್ಲಿ ಒಂದು ವಾರಗಳ ಕಾಲ ಬೃಹತ್ ದನಗಳ ಜಾತ್ರೆಯೂ ನಡೆಯುತ್ತದೆ. ಧ್ವಜಾರೋಹಣ ದೇವರ ಪಟ್ಟಕ್ಕೆ ಕೂರಿಸುವುದು ಸಮೀಪದ ಊರುಗಳಿಗೆ ಜಾತ್ರೆಯ ಮುನ್ನ ಮಡಲಕ್ಕಿಗೆ ಹೋಗುವುದು ಊರಾಡುವುದು ಭಕ್ತರು ನಿತ್ಯವೂ ಒಂದೊಂದು ವಾನ ಹೊರಡಿಸಿ ಮೆರವಣಿಗೆ, ರೇವಣರನ್ನು ಉತ್ಸವದಲ್ಲಿ ಮೆರೆಸುವುದು ನಡೆಯುತ್ತದೆ. ರೇವಣಸಿದ್ದೇಶ್ವರ ಕುರಿತ ಕರ್ನಾಟಕದ ಬಹುದೊಡ್ಡ ಜಾತ್ರೆ ಇದಾಗಿದ್ದು ಇದೊಂದು ವೀರಶೈವರ ಪ್ರಬಲ್ಯದಲ್ಲಿ ನೆರೆವೇರುತ್ತಿದೆ. ಡೊಳ್ಳು ಸೇವೆ, ಭಂಡಾರದ ಸೇವೆ, ಮಂಡೆ ಈ ಎಲ್ಲವೂ ಕುರುಬರ ಸಂಪ್ರದಾಯದಂತೆಯೆ ಜರುಗುತ್ತವೆ.

ತುಮಕೂರು ಜಿಲ್ಲೆಯ ತುರುವೇಕೆರೆಯಲ್ಲಿ ರೇವಣ ಸಿದ್ದೇಶ್ವರನ ಜಾತ್ರೆ ವಿಶಿಷ್ಠವಾಗಿ ನಡೆಯುತ್ತದೆ. ಶಿವರಾತ್ರಿಯ ಸಂದರ್ಭದಲ್ಲಿ ನಡೆಯುವ ಈ ಉತ್ಸವದಲ್ಲಿ ರೇವಣರ ಮೂರ್ತಿಯನ್ನು ಪಲ್ಲಕ್ಕಿಯ ಮೇಲೆ ಕೂರಿಸಿ ಊರ ಬೀದಿಗಳಲ್ಲಿ ಮರವಣಿಗೆ ನಡೆಸಲಾಗುತ್ತದೆ. ಹೆಜ್ಜೆ ಹೆಜ್ಜೆಗೂ ಇಡುಗಾಯಿ ನೆಡೆಮುಡು ಹಾಸಿ ದೇವರನ್ನು ಮೆರವಣಿಗೆಯಲ್ಲಿ ತರಲಾಗುವುದು. ರಾತ್ರಿಯಲ್ಲಿ ಬಸವನ ಮೇಲೆ ನಗಾರಿ ವಾದನ ಸುಡು ಗುಂಡುಗಳ ಬಾರಿ ಉತ್ಸವಕ್ಕೆ ಕಳೆಗಟ್ಟುತ್ತದೆ. ರಾತ್ರಿ ಇಡೀ ಉತ್ಸವದಲ್ಲಿ ಜನಪದ ಕಲಾ ಪ್ರದರ್ಶನವೂ ಇರುತ್ತದೆ. ವಿಶೇಷವಾಗಿ ಸೋಮನ ಕುಣಿತ, ಕೆಲಮೊಮ್ಮೆ ಕೀಲು ಕುದುರೆಯ ಪ್ರದರ್ಶನವೂ ಇರುತ್ತದೆ. ಬೆಳಗಾಗುವ ವೇಳೆಗೆ ದೇವರನ್ನು ಗುಡಿ ದುಂಬಿಸಿ ಭಕ್ತರಿಗೆ ಗ್ರಾಮಸ್ತರಿಗೆ ಸಿಹಿ ಊಟ ಹಾಕುವ ಪದ್ಧತಿ ಇಂದಿಗೂ ಉಂಟು. ಈ ದೇವರ ಉತ್ಸವದ ನಂತರ ಮಾವೊರಮ್ಮ  ಎಂಬ ಹೆಣ್ಣು ದೇವತೆಯ ಜಾತ್ರೆಯೂ ವಿಜ್ರಂಭಣೆಯಿಂದ ನಡೆದು ಮಾಂಸಾಹಾರದ ವಿಶೇಷ ಭೋಜನ ಭರ್ಜರಿಯಾಗಿ ನಡೆಯುತ್ತದೆ. ಹರ್ತಿಕೋಟೆ ದೊಡ್ಡೇರಿ ತಾಳಕಟ್ಟೆ ಈ ಭಾಗಗಳಲ್ಲಿ ಗುರುರೇವಣರ ಜಾತ್ರೆಯನ್ನು ಅಡ್ಡಪಲ್ಲಕ್ಕಿಯ ಮೂಲಕ ನಡೆಸಲಾಗುತ್ತದೆ. ಇದಕ್ಕೆ ಪರುಶುರಾಮಪುರದ ಪಗಡಲಬಂಡ, ಕೊಂಡ್ಲಹಳ್ಳಿ (ಮೊಳಕಾಲ್ಮೂರು) ಬೀಲಿಚೋಡು-ಹುಲ್ಲೂರು, ತುರುವನೂರು, ಕಣಜನಹಳ್ಳಿ, ನಗರಂಗೆರೆ, ಕಾರೇಹಳ್ಳಿ ಈ ಗ್ರಾಮಗಳ ರೇವಣಸಿದ್ಧೇಶ್ವರನ ಒಕ್ಕಲು ಮನೆತನಗಳು ಕಲೆತು ಮಿಥುನದ ಅಕ್ಕಿ ಹಾಕುವುದು ಒಂದು ವಿಶೇಷವಾಗಿದೆ. ಈ ಭಾಗದಲ್ಲಿ ಗುರುರೇವಣರ ಉತ್ಸವದ ಕಾಲದಲ್ಲಿ ಮಾಂಸಾಹಾರವನ್ನು ನಿರ್ಧಿಷ್ಟ ದಿನಗಳವರೆಗೆ ನಿಷೇಧಸಿರುವುದನ್ನು ಕಾಣಬಹುದು. ಉತ್ತರಕರ್ನಾಟಕದ ಭಾಗಗಳಲ್ಲಿಯೂ ರೇವಣಸಿದ್ಧನ ಜಾತ್ರೆ, ಉತ್ಸವ ಜರುಗುತ್ತವೆ. ಇಲ್ಲಿ ಬೀರದೇವರ ಜಾತ್ರೆಯಂತೆ ರೇವಣರ ಆರಾಧನೆಯೂ ನಡೆಯುತ್ತದೆ. ದಕ್ಷಿಣ ಕರ್ನಾಟಕ ಭಾಗದ

ಮೈಸೂರು, ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಈ ಜಿಲ್ಲೆಗಳಲ್ಲಿ ರೇವಣಸಿದ್ಧ ಗುರುಸಿದ್ಧರಾಮೇಶ್ವರದ ಉತ್ಸವಗಳು ಸಮಾನವಾಗಿ ಅಥವಾ ಒಂದೇ ಸ್ವರೂಪದಲ್ಲಿ ನಡೆಯುತ್ತವೆ. ಬೀರದೇವರಜಾತ್ರೆ ಭಿನ್ನವಾಗಿ ಜಾತ್ರೆಯ ಕೊನೆಯಲ್ಲಿ ಮಾಂಸಾಹಾರದ ಸಮಾರಾಧನೆಯಲ್ಲಿ ಮುಕ್ತಾಯವಾಗುತ್ತದೆ.

ಇಂಡಿ ತಾಲ್ಲೂಕಿನ ಹೊರ್ತಿಯಲ್ಲಿರುವ ರೇವಣಸಿದ್ಧೇಶ್ವರನ ಜಾತ್ರೆ ಶ್ರಾವಣ ಮಾಸದ ಕೊನೆಯ ಸೋಮವಾರ ಬೃಹತ್ ಪ್ರಮಾಣದಲ್ಲಿ ನಡೆಯುತ್ತದೆ. ಮರದ ಗಾಲಿಯತೇರು ಹರಿಯುತ್ತದೆ. ಈ ಎರಡು ಸ್ಥಳಗಳನ್ನು ಹೊರತುಪಡಿಸಿ ಉಳಿದ ರೇವಣಸಿದ್ಧೇಶ್ವರನ ಉತ್ಸವ ಸಾಮಾನ್ಯವಾಗಿ ಪಲ್ಲಕ್ಕಿಯ ಮೇಲೆ ನಡೆಯುವುದು ವಾಡಿಕೆಯಾಗಿದೆ.

ಹೀಗೆ ರೇವಣಸಿದ್ಧೇಶ್ವರನ ಆರಾಧನೆಗೈಯುವ ಜಾತ್ರೆ–ಉತ್ಸವಗಳು ವಿವಿಧ ರೀತಿಯಾಗಿ ನಡೆಯುತ್ತವೆ. ಅಂತಹ ಎಲ್ಲಾ ಜಾತ್ರೆಯ ಸಂದರ್ಭಗಳನ್ನು ವಿಡಿಯೋ–ಆಡಿಯೋ ಮೂಲಕ ದಾಖಲೀಕರಣ ಮಾಡಿದರೆ ಇನ್ನು ಹೆಚ್ಚಿನ ವಿಷಯಗಳು ಬೆಳಕಿಗೆ ಬರುತ್ತವೆ.